## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಪ್ರತಾಪಸಿಂಹ ನಾಯಕ್ ರವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಉತ್ತರ.**

**ವಿಷಯ:** ಉಡುಪಿ ಜಿಲ್ಲೆಯ, ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪಾದೂರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ISPRL(Indian Strategic Petroleum Reserve Limited) 2015 ರಿಂದ ಗ್ರಾಮ ಪಂಚಾಯತ್‌ಗೆ ಆಸ್ತಿ ಮತ್ತು ಕಟ್ಟಡ ತೆರಿಗೆ ಪಾವತಿಸದೆ, ಬಾಕಿ ಉಳಿಸಿಕೊಂಡಿದ್ದು ಗ್ರಾಮ ಪಂಚಾಯತ್‌ಗೆ ಆದಾಯದ ಕೊರತೆ ಉಂಟಾಗಿರುತ್ತದೆ. ಇದೀಗ ISPRL ಎರಡನೇ ಹಂತದ ಯೋಜನೆ ಪ್ರಕ್ರಿಯೆ ಚಾಲನೆಯಲ್ಲಿದ್ದು, ಪ್ರಥಮ ಹಂತದ ಯೋಜನೆಯಲ್ಲಿ 180 ಎಕರೆ ಜಾಗದಲ್ಲಿ ಕೈಗಾರಿಕಾ ಘಟಕ ಸ್ಥಾಪಿಸಲಾಗಿರುತ್ತದೆ ಹಾಗೂ ಎರಡನೇ ಹಂತದ ಯೋಜನೆಯಲ್ಲಿ 210 ಎಕರೆ ಜಾಗದಲ್ಲಿ ಕೈಗಾರಿಕಾ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಈ ಪರಿಣಾಮದಿಂದಾಗಿ ಗ್ರಾಮದಲ್ಲಿ ಹೊಸ ಮನೆಗಳ ನಿರ್ಮಾಣ ಕಡಿಮೆಯಾಗಿರುತ್ತದೆ ಹಾಗೂ ಹಳೆಯ ಮನೆಯವರು ವಲಸೆ ಹೋಗುತ್ತಿರುವುದರಿಂದ ಗ್ರಾಮ ಪಂಚಾಯತ್‌ಗೆ ಅತಿ ಹೆಚ್ಚಿನ ಮಟ್ಟದಲ್ಲಿ ಆದಾಯದ ಕೊರತೆ ಉಂಟಾಗಿ ಅಭಿವೃದ್ಧಿ ಕಾರ್ಯಗಳಿಗೆ ತೀವ್ರ ಹಿನ್ನಡೆಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ISPRL ಮಜೂರು ಗ್ರಾಮ ಪಂಚಾಯತ್ ತೆರಿಗೆ ಪಾವತಿಸದಿರುವುದರಿಂದ ಹಾಗೂ ಸಿಎಸ್‌ಆರ್ ಅನುದಾನವನ್ನು ಪಂಚಾಯಿತಿಯ ವ್ಯಾಪ್ತಿಯಲ್ಲಿ ವಿನಿಯೋಗಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

***

**ಉತ್ತರ:** ಉಡುಪಿ ಜಿಲ್ಲೆಯ, ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯತ್ ಪಾದೂರು ಗ್ರಾಮದಲ್ಲಿ ISPRL(Indian Strategic Petroleum Reserve Limited) ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ ಪ್ರದೇಶದ ಆಸ್ತಿ ತೆರಿಗೆ ಕುರಿತಂತೆ ಗ್ರಾಮ ಪಂಚಾಯತ್‌ನಿಂದ 2016-17 ರಿಂದ 2021-22 ರವರೆಗೆ ತೆರಿಗೆ ಹಾಗೂ ಉಪಕರಣಗಳು ಸೇರಿ ಒಟ್ಟು ತೆರಿಗೆ ಮೊತ್ತವಾಗಿ ರೂ.37,42,17,898.00 ಮೊತ್ತವನ್ನು ನೀಡುವ ಬಗ್ಗೆ ಗ್ರಾಮ ಪಂಚಾಯತ್‌ನಿಂದ ದಿನಾಂಕ:24.06.2022 ರಂದು ತಗಾದೆ ನೋಟೀಸನ್ನು ನೀಡಲಾಗಿರುತ್ತದೆ. ಸದರಿ ತಗಾದೆ ನೋಟೀಸಿನನ್ವಯ ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯು ತೆರಿಗೆ ವ್ಯಾಪ್ತಿಗೆ ಒಳಪಡದೆ ಇರುವುದರಿಂದ ಮತ್ತು ತೆರಿಗೆ ವಿನಾಯಿತಿಯನ್ನು ಹೊಂದಿರುವುದಾಗಿ ತಿಳಿಸಿರುವುದಲ್ಲದೆ ತೆರಿಗೆ ಲೆಕ್ಕಾಚಾರದ ಬಗ್ಗೆಯೂ ಸ್ಪಷ್ಟತೆ ಇಲ್ಲದಿರುವುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ಹಾಗೂ ತತ್ಸಂಬಂಧ ನಿಯಮಗಳನ್ವಯ ಸದರಿ ನೋಂದಾಯಿತ ಸಂಸ್ಥೆಯು ತೆರಿಗೆ ವ್ಯಾಪ್ತಿಗೆ ಒಳಪಟ್ಟಿದ್ದು, ತೆರಿಗೆ ಮೊತ್ತ ಲೆಕ್ಕಾಚಾರದಲ್ಲಿ ಆಕ್ಷೇಪಣೆಗಳಿದ್ದಲ್ಲಿ ಸಂಸ್ಥೆಯವರ ಸಮ್ಮುಖದಲ್ಲಿ ತಾಂತ್ರಿಕ ಇಂಜಿನಿಯರ್ ರವರ ಮೂಲಕ ಅಳತೆ ಮಾಡಿಸಿ ಪರಸ್ಪರ ಒಪ್ಪಿಗೆಯೊಂದಿಗೆ ತೆರಿಗೆ ಮೌಲ್ಯವನ್ನು ನಿರ್ಧರಿಸಲು ಗ್ರಾಮ ಪಂಚಾಯತ್ ವತಿಯಿಂದ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ ಸಂಸ್ಥೆಗೆ ಎಲ್ಲಾ ಸಹಕಾರವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಇದೀಗ ಸದರಿ ಆಸ್ತಿ ತೆರಿಗೆಗೆ ಸಂಬಂಧಿಸಿ ISPRL ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 21598/2022 (LB-RES) ರಂತೆ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣದ ಬಗ್ಗೆ ದಾಖಲಾತಿಗಳ ಸಹಿತ ಕಂಡಿಕಾವಾರು ಷರಾವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ISPRL ಸಂಸ್ಥೆಯ ಸಿ.ಎಸ್. ಆರ್. ಅನುದಾನದಡಿ ಕಾಮಗಾರಿ ಅನುಷ್ಠಾನದ ಬೇಡಿಕೆಯ ಪಟ್ಟಿಯನ್ನು ಗ್ರಾಮ ಪಂಚಾಯತ್‌ನಿಂದ ಆಗ್ಗಿಂದಾಗ್ಗೆ ಸಂಸ್ಥೆಗೆ ನೀಡಲಾಗುತ್ತಿದೆ ಹಾಗೂ ಬಾಕಿ ತೆರಿಗೆ ಪಾವತಿ ಕುರಿತಂತೆ ಸಂಸ್ಥೆಯವರೊಂದಿಗೆ ಚರ್ಚಿಸಿ ಬಾಕಿ ಇರುವ ತೆರಿಗೆ ಮೊತ್ತವನ್ನು ಪಡೆಯುವ ಬಗ್ಗೆ ಗ್ರಾಮ ಪಂಚಾಯತ್ ಹಂತದಲ್ಲಿ ಕ್ರಮ ಜರುಗಿಸಲಾಗುತ್ತಿದೆ.

ಸಂಖ್ಯೆ: ಗ್ರಾಅಪ 357 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

22